ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ, ಕೈಮಗ್ಗದವರಿಗೆ ಏನು ಸೌಲಭ್ಯ ಬೇಕಾಗಿದೆ ಎನ್ನತಕ್ಕಂಥದರ ಬಗ್ಗೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಮಿಟೀಂಗ್ ಮಾಡಿ ಸರ್ಕಾರದ ಕಡೆಯಿಂದ ಏನು ಮಾಡುವುದಕ್ಕೆ ಸಾಧ್ಯವಾಗುತ್ತದೆಯೋ ಅದನ್ನು ಮಾಡುವುದಕ್ಕೆ ಕ್ರಮ ತೆಗೆದುಕೊಳ್ಳಲಾಗುತ್ತದೆ. ಇವತ್ತಿನದಿವಸ ವಿದ್ಯುತ್ ದರವನ್ನು ಹೆಚ್ಚು ಅಥವಾ ಕಡಿಮೆ ಮಾಡುವುದು ಕರ್ನಾಟಕ ಎಲೆಕ್ಟ್ರಿಸಿಟಿ ರೆಗ್ಯುಲೇಟರಿ ಕಮಿಷನ್ ಮುಂದೆ ಇದೆ. ಆದ್ದರಿಂದ. ಇವರೇ ಅಂತಿಮ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ. ಆದರೆ, ನಮ್ಮ ವ್ಯಾಪ್ತಿಯಲ್ಲಿ ಏನಾದರೂ ಹೆಚ್ಚು ಕಡಿಮೆ ಮಾಡುವುದರ ಬಗ್ಗೆ ಅಥವಾ ಏನಾದರೂ ಮಾಡಿಫಿಕೇಶನ್ ಮಾಡುವುದಕ್ಕೆ ಸಾಧ್ಯವಿದ್ದರೆ. ಅದನ್ನು ಮಾಡುವುದಕ್ಕೆ ಸಂಬಂಧಪಟ್ಟಂಥ ಅಧಿಕಾರಿಗಳನ್ನು ಸಭೆಗೆ ಕರೆಸಿ ತೀರ್ಮಾನ ತೆಗೆದುಕೊಳ್ಳುತ್ತೇನೆ.

2002-03ನೇ ಸಾಲಿಗೆ 11ನೇ ಹಣಕಾಸು ಯೋಜನೆಯಲ್ಲಿ ಕೇಂದ್ರದಿಂದ ಬಿಡುಗಡೆಯಾದ ಹಣ

28(390) ಶ್ರೀ ನಾರಾಯಣಸ್ವಾಮಿ.ಎ. (ಆನೇಕಲ್) ಮಾನ್ಯ ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ. ರಾಜ್ಯದ ಮಹಾನಗರ, ನಗರ ಪಾಲಿಕೆ ಪುರಸಭೆ, ನಗರ ಪಟ್ಟಣ ಪ್ರದೇಶಗಳಿಗೆ 11ನೇ ಹಣಕಾಸು .ಯೋಜನೆಯಲ್ಲಿ 2002-03 ನೇ ಸಾಲಿಗೆ ಕೇಂದ್ರದಿಂದ ಹಣ ಬಿಡುಗಡೆಯಾಗಿದೆಯೇ?

ಆ. ಹಾಗಿದ್ದಲ್ಲಿ ವಿವಿಧ ಸ್ಥಳೀಯ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಲಾಗಿದೆಯೇ? (ದಿನಾಂಕವನ್ನು ತಿಳಿಸುವುದು)

ಇ. ಬಿಡುಗಡೆ ಮಾಡದಿದ್ದರೆ ಅದಕ್ಕೆ ಕಾರಣಗಳೇನು? ಯಾವಾಗ ಬಿಡುಗಡೆ ಮಾಡಲಾಗುವುದು?

ಶ್ರೀ ಡಿ.ಕೆ. ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) :

ಅ. ಹೌದು.

ಆ. ಇಲ್ಲ.

ಇ. ಈ ಬಗ್ಗೆ ಇತ್ತೀಚೆಗೆ ಅಂತಿಮ ನಿರ್ಣಯ ತೆಗೆದುಕೊಂಡಿದ್ದು ಸೂಕ್ತ ಆದೇಶವನ್ನು ಶೀಘ್ರವಾಗಿ ಹೊರಡಿಲಾಗುವುದು.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಸಚಿವರು ಉತ್ತರವನ್ನು ಒದಗಿಸಿದ್ದಾರೆ. ರಾಜ್ಯದ ಮಹಾನಗರ ಪಾಲಿಕೆ, ಪುರಸಭೆ, ನಗರ ಪಟ್ಟಣ ಪ್ರದೇಶಗಳಿಗೆ 11ನೇ ಹಣಕಾಸಿನ ಯೋಜನೆಯಿಂದ ಕೇಂದ್ರ ಸರ್ಕಾರದಿಂದ ಹಣ ಬಿಡುಗಡೆಯಾಗಿದೆಯೇ ಎಂಬ ಪ್ರಶ್ನೆಗೆ ಹಣ ಬಿಡುಗಡೆಯಾಗಿದೆ ಎಂದು ಉತ್ತರ ಕೊಟ್ಟಿದ್ದಾರೆ. ನಮ್ಮ ರಾಜ್ಯದಲ್ಲಿರುವ ನಗರ ಮತ್ತು ಪುರಸಭೆಯ ವ್ಯಾಪ್ತಿಗೆ ಬರತಕ್ಕಂಥ ಪ್ರದೇಶಗಳ ಅಭಿವೃದ್ಧಿಗಾಗಿ 3.744 ಲಕ್ಷ ರೂಪಾಯಿಗಳನ್ನು 9 ತಿಂಗಳ ಹಿಂದೆಯೇ ಕೇಂದ್ರ ಸರ್ಕಾರ ಮಂಜೂರು ಮಾಡಿದೆ. ಆದರೆ ಈ ಹಣವನ್ನು ಪುರಸಭೆಗಳಿಗಾಗಲಿ ಅಥವಾ ಮಹಾನಗರ ಪಾಲಿಕೆಗಳಿಗಾಗಲೀ ಇದುವರೆಗೂ ಹಣ ಬಿಡುಗಡೆ ಮಾಡಿಲ್ಲ. ನನಗೆ ತಿಳಿದ ಮಾಹಿತಿ ಪ್ರಕಾರ, ರಾಜ್ಯದ ಬಹುತೇಕ ಸಿ.ಎಂ.ಸಿ ಮತ್ತು ಟಿ.ಎಂ.ಸಿ.ಗಳು ಯು.ಸಿ ಕಳುಹಿಸಿಕೊಟ್ಟಿಲ್ಲದೆ ಇರುವುದರಿಂದ ಮ್ಯಾಚಿಂಗ್ ಗ್ರ್ಯಾಂಟ್‌ನ್ನು ಸರ್ಕಾರ ಇದುವರೆಗೂ

ಕಟ್ಟಿಕೊಡುವುದಕ್ಕೆ ಆಗಿಲ್ಲ. ಆದ್ದರಿಂದ ಮ್ಯಾಚಿಂಗ್ ಗ್ರಾಂಟ್‌ನ್ನು ಏಕೆ ಕಟ್ಟಿಕೊಟ್ಟಿಲ್ಲ ಎನ್ನತಕ್ಕಂಥದನ್ನು ಮತ್ತು ಕೇಂದ್ರದಿಂದ ಹಣವನ್ನು ಇದುವರೆಗೆ ಏಕೆಬಿಡುಗಡೆ ಮಾಡಿಲ್ಲ ಎನ್ನತಕ್ಕಂಥದರ ಬಗ್ಗೆ ಮಾನ್ಯ ಸಚಿವರು ಉತ್ತರ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ..

ಶ್ರೀ ಡಿ.ಕೆ.ಶಿವಕುಮಾರ್ (ನಗರಾಭಿವೃದ್ಧಿ ಸಚಿವರು) : ಗೌರವಾನ್ವಿತ ಅಧ್ಯಕ್ಷರೆ ಸರ್ಕಾರದಿಂದ ಹಣ ಬಿಡುಗಡೆ ಮಾಡಬೇಕೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ನಾವು ಈಗಾಗಲೇ 2002-2003ನೇ ಸಾಲಿನಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಎನ್ನತಕ್ಕಂಥ ಪ್ರಶ್ನೆಗೆ ನಾವು ಹೌದು ಎಂದು ತಿಳಿಸಿದ್ದೇವೆ. ಹಾಗಾಯೇ ವಿವಿಧ ಸಂಸ್ಥೆಗಳಿಗೆ ಹಣ ಬಿಡುಗಡೆ ಮಾಡಿಲ್ಲ ಎಂದು ಸಹ ತಿಳಿಸಿದ್ದೇವೆ. ಈ ಹಣವನ್ನು ಬಿಡುಗಡೆ ಮಾಡುವುದಕ್ಕೋಸ್ಕಾರ ಏನೇನು ಕಂಡಿಷನ್‌ಗಳನ್ನು ಇಂಪೋಜ್ ಮಾಡಬೇಕು ಎನ್ನತಕ್ಕಂಥದನ್ನು ಒಂದು ತಿಂಗಳ ಹಿಂದೆ ನಡೆದಂಥ ಕ್ಯಾಬಿನೆಟ್ ಸಭೆಯಲ್ಲಿ ಒಂದು ನಿರ್ಣಯವನ್ನು ಮಾಡಿದ್ದೇವೆ. ಹಾಗೆಯೇ ಯಾವರೀತಿಯಾಗಿ ಮತ್ತು ಯಾವುದಕ್ಕೆ ಹಣ ಬಿಡುಗಡೆ ಮಾಡಬೇಕು ಎನ್ನತಕ್ಕಂಥದರ ಬಗ್ಗೆಯೂ ಕೂಡ ಈಗಾಗಲೇ ತೀರ್ಮಾನ ತೆಗೆದುಕೊಂಡಿದ್ದೇವೆ. ಆಕ್ಟ್ ಪ್ರಕಾರ ಕಾರ್ಪೊರೇಷನ್‌ಗಳಿಗೆ 45 ಲಕ್ಷ ರೂ ಮತ್ತು ನಗರಸಭೆಗೆ 22.95 ಲಕ್ಷ ರೂ ಹಾಗೂ ಪುರಸಭೆಗಳಿಗೆ 18 ಲಕ್ಷ ರೂ ಮತ್ತು ಪಟ್ಟಣ ಪಂಚಾಯತಿಗಳಿಗೆ 11.35 ಲಕ್ಷ ರೂಪಾಯಿ ಬಿಡುಗಡೆ ಮಾಡುವುದಕ್ಕೆ ಎಲ್ಲಾ ಕ್ರಮವನ್ನು ಕೈಗೊಳ್ಳಲಾಗಿದೆ. ಒಟ್ಟಿನಲ್ಲಿ ಆದಷ್ಟು ಬೇಗ ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಬಿ.ಎಸ್.ಬಚ್ಚೇಗೌಡ : ಮಾನ್ಯ ಅಧ್ಯಕ್ಷರೆ ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಹಣ 2002-03 ರಲ್ಲಿ ಬಿಡುಗಡೆಯಾಗಿಲ್ಲವೆಂದು ಸಭೆಗಳನ್ನು ಕರೆದಾಗ ನಮಗೆ ಹೇಳುತ್ತಾರೆ. ಕೇಂದ್ರ ಸರ್ಕಾರದಿಂದ ಹಣ ಬಂದಿರತಕ್ಕಂಥದ್ದು,ರಾಜ್ಯದಿಂದ ಕೊಡತಕ್ಕಂಥದ್ದು ಮ್ಯಾಚಿಂಗ್ ಗ್ರಾಂಟ್ ಈಸ್ ಡಿಫರೆಂಟ್. ಕೇಂದ್ರ ಸರ್ಕಾರದಿಂದ ಎಷ್ಟು ಹಣ ಬಿಡುಗಡೆಯಾಗಿದೆ ಎಂದು ಮಾನ್ಯ ನಾರಾಯಣಸ್ವಾಮಿಯವರು ಕೇಳುತ್ತಿದ್ದಾರೆ, ನಾವು ಶಾಸಕರಾದವರು ಪುರಸಭೆಗೆ ಹೋದಾಗ ಇನ್ನು ಆ ಹಣ ಬಿಡುಗಡೆಯಾಗಿಲ್ಲವೆಂದು ಹೇಳುತ್ತಾರೆ, ಮಾನ್ಯ ಸದಸ್ಯರು ಹೇಳುತ್ತಿದ್ದಾರೆ ಮೂವತ್ತೇಳೂವರೆ ಕೋಟಿ ರೂಪಾಯಿ ಹಣ ಬಿಡುಗಡೆಯಾಗಿದೆ ಎಂದು ಇದನ್ನು ಮಾನ್ಯ ಸಚಿವರು ಕ್ಲಾರಿಫೈ ಮಾಡಬೇಕು. ಬಿಡುಗಡೆಯಾಗಿದೆಯೋ ಅಥವಾ ಇಲ್ಲವೋ ಅಥವಾ ಅದನ್ನು ಬೇರೆ ಕಡೆ ಉಪಯೋಗಿಸಿದ್ದಾರೋ ಎನ್ನುವುದನ್ನು ಮಾನ್ಯ ಸಚಿವರು ನಮಗೆ ತಿಳಿಸಬೇಕು. ನಮ್ಮ ಸರ್ಕಾರ ಕೊಡುವುದು ಈಸ್ ಡಿಫರೆಂಟ್. ಕೇಂದ್ರ ಸರ್ಕಾರದಿಂದ ಬಂದಿರುವ ಹಣ ಏನಾಯಿತು? ಅಧ್ಯಕ್ಷರು : ಹೇಳುತ್ತಾರೆ ಬಿಡಿ.

ಶ್ರೀ ಡಿ.ಕೆ.ಶಿವಕುಮಾರ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಗೆ ಹೌದು ಎಂದು ಉತ್ತರಿಸಿದ್ದೇನೆ. ಕಂಪ್ಲೀಟ್ ಫಿಗರ್ ಅವರೇ ಹೇಳಿದ್ದಾರೆ ನಾವು ಕೂಡ ಹೇಳಿದ್ದೇವೆ. 3744 ಲಕ್ಷ ರೂಪಾಯಿಗಳನ್ನು ಕರ್ನಾಟಕ ರಾಜ್ಯಕ್ಕೆ ಬಿಡುಗಡೆ ಮಾಡಿದ್ದು ಕೇಂದ್ರ ಸರ್ಕಾರದ ಹಣವು ರಾಜ್ಯ ಸರ್ಕಾರಕ್ಕೆ ದಿನಾಂಕ : 19-6-02ಕ್ಕೆ ಬಂದಿದೆ. ಹಣ ಬರುವುದಕ್ಕೆ ಒಂದು ರೂಲ್ಸ್ ಫ್ರೇಮ್ ಮಾಡಿದ್ದೇವೆ ಅದು ನಿಮಗೂ ಗೊತ್ತಿದೆ. ಯಾವ ಪಟ್ಟಣ ಪಂಚಾಯಿತಿಗೆ ಎಷ್ಟು ಕೊಡಬೇಕು ಅದನ್ನು ಆದಷ್ಟು ಬೇಗನೆ ಬಿಡುಗಡೆ ಮಾಡುತ್ತೇವೆ. ಈಗ ನಾವು ಡಿಸೀಷನ್ ತೆಗೆದು ಕೊಂಡಿರುತ್ತೇವೆ. ಕಾರ್ಪೊರೇಶನ್‌ಗಳಿಗೆ 45 ಲಕ್ಷ ರೂಪಾಯಿಗಳಂತೆ ಮಾಡಿದ್ದೇವೆ, ಆದಷ್ಟು ಬೇಗ ಹಣ ಬಿಡುಗಡೆ ಮಾಡುತ್ತೇವೆ.

ಶ್ರೀ ಜಗದೀಶ್ ಶೆಟ್ಟರ್ (ಮಾನ್ಯ ವಿರೋಧ ಪಕ್ಷದ ನಾಯಕರು): ಮಾನ್ಯ ಅಧಕ್ಷರೆ ಇವತ್ತು ಸ್ಥಳೀಯ ಸಂಸ್ಥೆಗಳು ಏನಾಗಿವೆಯೆಂದರೆ ನಾವು ಅಧಿಕಾರವನ್ನು ವಿಕೇಂದ್ರೀಕರಣ ಮಾಡುತ್ತಿದ್ದೇವೆ. ಅವುಗಳನ್ನು ಆರ್ಥಿಕ ಸಬಲ ಮಾಡಬೇಕೆಂದು ನಾವೆಲ್ಲ ಹೇಳುತ್ತಿದ್ದೇವೆ. ಆದರೆ ಇವತ್ತು ಅವುಗಳನ್ನು ಆರ್ಥಿಕವಾಗಿ ಬಲಪಡಿಸುವಂಥ ಕೆಲಸವಾಗುತ್ತಿಲ್ಲ. ಇವತ್ತು ಕೇಂದ್ರ ಸರ್ಕಾರದಿಂದ ಬಂದಿರತಕ್ಕಂಥ ಹಣ ಇರಬಹುದು ಅಥವಾ ನಿಮ್ಮ ಕಡೆಯಿಂದ ಕಳುಹಿಸುವಂಥದ್ದು. ಆ ಅವಧಿಯೊಳಗಾಗಿ ನಿಯಮಿತವಾಗಿ ನೀವು ಕಳುಹಿಸಿದರೆ ಅವು ಬದುಕಿಕೊಳ್ಳುವುದಕ್ಕೆ ಸಾಧ್ಯವಿದೆ. ಅಲ್ಲಿ ಅಭಿವೃದ್ದಿ ಕೆಲಸಗಳು ಆಗುವುದಕ್ಕೆ ಸಾಧ್ಯವಿದೆ. ಇಲ್ಲದಿದ್ದರೆ ನೀವು ಮಹಾನಗರ ಪಾಲಿಕೆಗಳನ್ನು ತೆಗೆದುಕೊಳ್ಳಿ, ಟೌನ್ ಪಂಚಾಯಿತಿ ತೆಗೆದುಕೊಳ್ಳಿ, ಪುರಸಭೆಯನ್ನು ತೆಗೆದುಕೊಳ್ಳಿ, ಅಲ್ಲಿ ಹೋದರೆ ಯಾವ ಒಂದು ಅಭಿವೃದ್ದಿ ಕೆಲಸಗಳು ಆಗುತ್ತಿಲ್ಲ. ಆರ್ಥಿಕ ಪರಿಸ್ಥಿತಿಯಿಂದ ಇವತ್ತು ಹದಗೆಟ್ಟು ಹೋಗುತ್ತಿದೆ. ನೀವು ಕೊಡುವಂಥ ಅನುದಾನವನ್ನು ರೆಗ್ಯುಲರ್ ಆಗಿ ಕೊಡುವುದಿಲ್ಲವೆಂದರೆ, ಅವಧಿಯೊಳಗಡೆ ಕೊಡದಿದ್ದರೆ ವಿಕೇಂದ್ರಿಕರಣ ಎನ್ನುವುದಕ್ಕೆ ಏನೂ ಅರ್ಥವಿಲ್ಲ. ಹಣ ಬಿಡುಗಡೆ ಮಾಡುವಂಥದ್ದು ಟೈಮ್‌ಬೌಂಡ್ ಮಾಡಿ ಅದರೊಳಗಡೆ ಬಿಡುಗಡೆ ಮಾಡುವಂಥದ್ದನ್ನು ಮಾಡಿ, ಪ್ರೋಸಿಜರ್ ಆಸ್ಪೆಕ್ಟ್ ಇದರಲ್ಲಿ ಟೈಮ್ ಹೋಗಬಾರದು.

ಅಧ್ಯಕ್ಷರು : ಮಾನ್ಯ ಶಿವಕುಮಾರ್‌ರವರೆ, ಬೇಗ ಬೇಗ ಹಣ ರಿಲೀಸ್ ಮಾಡಿಸಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, ಬಹುತೇಕ ಸಿಎಂಸಿ, ಟಿಎಂಸಿ, ಮಹಾನಗರ ಪಾಲಿಕೆಗಳು ನೀವು ಯು.ಸಿ.ಗಳನ್ನು ಕೊಡಲಿಲ್ಲ. ಯಾವ್ಯಾವು ಮಹಾನಗರ ಪಾಲಿಕೆಗಳು ಸಿಎಂಸಿ, ಟಿಎಂಸಿಗಳು ಯು.ಸಿ.ಗಳನ್ನು ತಲುಪಿಸಲಿಲ್ಲ? ಕಾಮಗಾರಿಗಳನ್ನು ಅವರು ಏಕೆ ಕೈಗೊಳ್ಳಲಿಲ್ಲ? ಅಧಿಕಾರಿಗಳ ಹೆಸರುಗಳನ್ನು ಹೇಳುವುದಕ್ಕೆ ಆಗುತ್ತದೆಯೇ? ಇದನ್ನು ಸಭೆಗೆ ತಿಳಿಸಬೇಕೆಂದು ನಾನು ಕೇಳಿಕೊಳ್ಳುತ್ತೇನೆ. ಕೇಂದ್ರ ಸರ್ಕಾರದಿಂದ 374 ಲಕ್ಷ ರೂಪಾಯಿಗಳು ಬಂದರು ಸಹ ನೀವು ಯಾವ ಸ್ಥಳೀಯ ಸಂಸ್ಥೆಗಳಿಗೆ ಕೂಡ ಹಣ ಬಿಡುಗಡೆ ಮಾಡಲಿಲ್ಲ. ಮತ್ತೊಂದು ಕಡೆ ಸ್ವಯಂಘೋಷಿತ ಆಸ್ತಿ. ತೆರಿಗೆ ಪದ್ಧತಿಯಿಂದ ಯಾವುದೇ ಪುರಸಭೆ, ನಗರಸಭೆಗೆ ರೆವಿನ್ಯು ಇಲ್ಲ. ಒಂದು ಚರಂಡಿ ಮಾಡುವುದಕ್ಕೆ ದೀಪವನ್ನು ಹಾಕುವುದಕ್ಕಾಗುತ್ತಿಲ್ಲ.

MR. SPEAKER : That is a different issue.37 ಕೋಟಿ ರೂಪಾಯಿಗಳನ್ನು ನೀವು ಏಕೆ ರಿಲೀಸ್ ಮಾಡಲಿಲ್ಲ ಎಂದು ಆ ಬಗ್ಗೆ ಮಾತ್ರ ಪ್ರಶ್ನೆ ಕೇಳಿ. ಸ್ವಯಂಘೋಷಿತ ಆಸ್ತಿ ತೆರಿಗೆ ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ ಸಿಎಂಸಿ ಅಥವಾ ಟಿಎಂಸಿ ಗೆ ಹಣದ ಕೊರತೆ ಇಲ್ಲ. ಅದರ ಬಗ್ಗೆ ಬೇಕಾಗಿಲ್ಲ. 37 ಕೋಟಿ ರೂಪಾಯಿಗಳ ಬಗ್ಗೆ ಮಾತ್ರ ಪ್ರಶ್ನೆ ಕೇಳಿ.

ಶ್ರೀ ಎ. ನಾರಾಯಣಸ್ವಾಮಿ : ಮಾನ್ಯ ಅಧ್ಯಕ್ಷರೆ, 9 ತಿಂಗಳುಗಳಿಂದ ಮ್ಯಾಚಿಂಗ್ ಗ್ರಾಂಟ್ ಕೊಡುವುದಕ್ಕಾಗುತ್ತಿಲ್ಲ. ಹಣ ಏಕೆ ಬಿಡುಗಡೆ ಮಾಡುವುದಕ್ಕಾಗುತ್ತಿಲ್ಲ ? ಯಾವಾಗ ಬಿಡುಗಡೆ ಮಾಡುತ್ತೀರಿ ?.

ಶ್ರೀ ಡಿ. ಕೆ. ಶಿವಕುಮಾರ್ : ಮಾನ್ಯ ಅಧ್ಯಕ್ಷರೆ. ಸ್ವಯಂಘೋಷಿತ ಆಸ್ತಿ ತೆರಿಗೆ ಬಗ್ಗೆ ಮಾನ್ಯ ಯೋಗೀಶ್‌ಭಟರು ಒಂದು ಪ್ರಶ್ನೆಯನ್ನು ಕೇಳಿದ್ದಾರೆ, ಆಗ ಇದನ್ನು ಇಟ್ಟುಕೊಳ್ಳೋಣ.

ನೀರಾವರಿ ಲೋಕೋಪಯೋಗಿ ಹಾಗೂ ಇತ್ಯಾದಿ ಇಲಾಖೆಗಳಲ್ಲಿನ ಗುತ್ತಿಗೆದಾರರ ಬಾಕಿ ಬಿಲ್ಲುಗಳ ಪಾವತಿ

29 (615) ಶ್ರೀ ಸಿಂಧ್ಯ ಪಿ.ಜಿ.ಆರ್ (ಕನಕಪುರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ನೀರಾವರಿ, ಲೋಕೋಪಯೋಗಿ ಹಾಗೂ ಇತ್ಯಾದಿ ಇಲಾಖೆಗಳಲ್ಲಿ ಕೆಲಸ ನಿರ್ವಹಿಸುವ ಗುತ್ತಿಗೆದಾರರಿಗೆ ರೂ 1500 ಕೋಟಿ ಬಿಲ್ಲುಗಳು ಬಾಕಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ.

ಆ) ಬಂದಿದ್ದಲ್ಲಿ ಬಾಕಿ ಹಣ ಸಂದಾಯ ಮಾಡಲು ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನುಃ

ಇ) ಗುತ್ತಿಗೆದಾರರ ಬಿಲ್ಲಗಳು ಬಾಕಿ ಉಳಿದಿರುವುದರಿಂದ, ಅಭಿವೃದ್ದಿ ಕಾಮಗಾರಿ ಕೆಲಸಗಳು ಸ್ಥಗಿತಗೊಂಡಿಲ್ಲವೇ?

ಈ) ಬಾಕಿ ಬಿಲ್ಲಿನ ಹಣ ಸಂದಾಯ ಮಾಡಲು ಸರ್ಕಾರ ಕಾಲಮಿತಿಯೇನಾದರೂ ವಿಧಿಸಿದೆಯೇ

ಉ) ವಿಧಿಸಿದ್ದಲ್ಲಿ ಎಂದಿನಿಂದ ಬಾಕಿ ಬಿಲ್ಲುಗಳ ಹಣ ಪಾವತಿ ಮಾಡಲಾಗುವುದು (ವಿವರಗಳನ್ನು ನೀಡುವುದು)?

ಶ್ರೀ ಎಸ್. ಎಂ. ಕೃಷ್ಣ (ಮಾನ್ಯ ಮುಖ್ಯಮಂತ್ರಿಗಳು)

ಅ) ಬೃಹತ್ ಮತ್ತು ಮಧ್ಯಮ ನೀರಾವರಿ ಸಣ್ಣ ನೀರಾವರಿ ಹಾಗೂ ಲೋಕೋಪಯೋಗಿ ಇಲಾಖೆಗಳಲ್ಲಿ ಕೆಳಕಾಣಿಸಿದಂತೆ ಬಾಕಿ ಬಿಲ್ಲುಗಳು ಇರುತ್ತವೆಃ

		ಕೋಟಿ ರೂ.ಗಳಲ್ಲಿ
(1)	ಬೃಹತ್ ಮತ್ತು ಮಧ್ಯಮ ನೀರಾವರಿ	325.73
(2)	ಸಣ್ಣ ನೀರಾವರಿ	144.60
(3)	ಲೋಕೋಪಯೋಗಿ ಇಲಾಖೆ	209.34
	ಒಟ್ಟು	679.67
		ರೂ.680.00 ಕೋಟಿಗಳು

ಆ) ಆಯವ್ಯಯದಲ್ಲಿ ಒದಗಿಸಿದ ಅನುದಾನ ಅನುಸರಿಸಿ ಹಾಗೂ ಸರ್ಕಾರದ ಸಂಪನ್ಮೂಲ ಅನುಸರಿಸಿ ಕಾಲಕಾಲಕ್ಕೆ ಬಿಲ್‌ಗಳ ಪಾವತಿಗಾಗಿ ಹಣ ಬಿಡುಗಡೆ ಮಾಡಲಾಗುತ್ತಿದೆ.

ಇ) ಇಲ್ಲ

ಈ) ಇಲ್ಲ ಆದರೆ ಬಾಕಿ ಬಿಲ್ಲುಗಳನ್ನು ಹಂತ ಹಂತವಾಗಿ ಕಡಿಮೆ ಮಾಡುವ ಬಗ್ಗೆ ಸರ್ಕಾರ ಪರಿಶೀಲಿಸುತ್ತಿದೆ.

ಉ) ಉದ್ಭವಿಸುವುದಿಲ್ಲ. ಆಯವ್ಯಯದ ಅನುದಾನ ಆಧರಿಸಿ ಬಾಕಿ ಇರುವ ಬಿಲ್ಲುಗಳನ್ನು ಪಾವತಿಸಲು ಕ್ರಮ ಕೈಗೊಳ್ಳಲಾಗುವುದು.